**ದಿನಾಂಕಃ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ವೈ ವಕೀಲರಿಂದಃ**

ದಾವಾ ಆಸ್ತಿಯು ಪ್ರತಿವಾದಿಯವರಿಗೆ ಸೇರಿದ ಆಸ್ತಿ ಅಂದರೆ ಸುಳ್ಳು. ನನ್ನ ತಂದೆಯವರು ಪುರಸಭೆಯ ಸದಸ್ಯರಾಗಿದ್ದರು ಅಂದರೆ ಸರಿ. ಈಗ ನನ್ನ ಸಹೋದರ ಪುರಸಭೆಯ ಸದಸ್ಯರು ಅಂದರೆ ಸರಿ. ದಾವಾ ಆಸ್ತಿ ಅಸ್ಸೆಸ್ಮೆಂಟ್ ನಂ.142/73 ಹಾಗೂ 143/74 ಪ್ರತಿವಾದಿಯವರಿಗೆ ಸೇರಿದ ಆಸ್ತಿ ಅಂದರೆ ಸರಿ. ನಾನು ಆಸ್ತಿ ಖರೀದಿಸುವ ಪೂರ್ವದಲ್ಲಿ ನಮ್ಮ ಆಸ್ತಿಯ ಪಶ್ಚಿಮ ಭಾಗದಲ್ಲಿ ಕಲ್ಲು ಕಂಬ ಕಟ್ಟಿದ್ದರು ಅಂದರೆ ಸರಿ. ನಾನು ಖರೀದಿಸಿದ ನಂತರ ಸದರಿ ಕಲ್ಲಕಂಬವನ್ನು ನಾನು ಕಿತ್ತಿರುವುದಿಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಲ್ಲುಕಂಬ ಇದ್ದ ಬಗ್ಗೆ ಕೇಳಿದಾಗ ಸಾಕ್ಷಿ ಹೌದು ಎಂದು ಉತ್ತರಿಸಿ ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-18 ರಲ್ಲಿ ಕಾಣುವ ಕಲ್ಲುಕಂಬವನ್ನು ಯಾರು ಕಿತ್ತುಹಾಕಿರುತ್ತಾರೆ ಅಂದರೆ ಸಾಕ್ಷಿಯು ನಾವು ಕಿತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ಅದು ಹೊಡೆದು ಹೋಗಿದ್ದರಿಂದ ನಮ್ಮ ಜಾಗದಲ್ಲಿ ಕೌಂಪೌಂಡ್ ಹಾಕಿರುತ್ತೇವೆ. ನಿಪಿ-18 ರಲ್ಲಿ ಕಾಣುವ ಕೌಂಪೌಂಡ್ ಈಗ ಇಲ್ಲ ನನ್ನ ಜಾಗದಲ್ಲಿ ನಾನು ಕೌಂಪೌಂಡ್ ಹಾಕಿಕೊಂಡಿರುತ್ತೇನೆ. ನಿಡಿ-1 2019 ರ ಭಾವಚಿತ್ರವಾಗಿರುತ್ತದೆ. ಅದರಲ್ಲಿ ಕಾರ ಶೆಡ್ ಇರುವುದಿಲ್ಲ. ನಾನು ದಾವೆಯಲ್ಲಿ ನಮೂದಿಸಿದ ಪೂರ್ವ-ಪಶ್ಚಿಮ 3 ಅಡಿ, ಉತ್ತರ-

ದಕ್ಷಿಣ 74.3 ಅಡಿ ಓಣಿ ನಿಪಿ–5 ಖರೀದಿ ಪತ್ರದಲ್ಲಿ ಮೂಲ ಮಾಲೀಕರು ಓಡಾಡಲು ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಅಂದರೆ ಸಾಕ್ಷಿಯು ಪಶ್ಚಿಮ ಭಾಗದಲ್ಲಿ ನಮೂದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಯವರ ಖರೀದಿ ಪತ್ರದಲ್ಲಿಯೂ ಸಹ ಸದರಿ ಜಾಗವನ್ನು ಉಪಯೋಗಿಸಲು ಹಕ್ಕು ಇದೆ ಎಂದು ಉತ್ತರಿಸುತ್ತಾರೆ. ನಾನು ಮೋಹನಪ್ಪ ರವರಿಂದ ಖರೀದಿಸಿದ್ದು, ಅವರ ಖರೀದಿ ಪತ್ರದಲ್ಲಿಯೂ ಸಹ ಪಶ್ಚಿಮ ದಿಕ್ಕಿನಲ್ಲಿ ಓಣಿ ಇದೆ ಎಂದು ನಮೂದಿಸಿರುತ್ತಾರೆ. ಸದರಿ ಓಣಿಯನ್ನು ಎಲ್ಲರೂ ಉಪಯೋಗಿಸಿಕೊಂಡು ಬಂದಿರುತ್ತೇವೆ.ಸದರಿ ಓಣಿಯನ್ನು ಉಪಯೋಗಿಸಲು ನನಗೂ ಹಕ್ಕು ಇದೆ ಎಂದು ನನ್ನ ಖರೀದಿ ಪತ್ರದಲ್ಲಿ ನಮೂದಿಸಿರುತ್ತಾರೆ ಅಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿನಲ್ಲಿ ಓಣಿ ಇದೆ ಎಂದು ನಮೂದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**